ಆ) ತುರುವೇಕೆರೆ ತಾಲ್ಲೂಕಿನಲ್ಲಿ ಬಿ.ಸಿ.ಎಂ ಹಾಸ್ಟೆಲ್ ಮಂಜೂರು ಮಾಡಲು ಮನವಿ ಸಲ್ಲಿಸಿದ್ದು ಈ ಸಂಬಂಧವಾಗಿ ಕೈಗೊಂಡ ಕ್ರಮವೇನು?

ಡಾ॥ ವೈ ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು, ೨೦೦೫-೦೬ ನೇ ಸಾಲಿನಲ್ಲಿ ೪೩ ಮುರಾರ್ಜಿ ದೇಸಾಯಿ ವಸತಿಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸುತ್ತದೆ.

ಆ) ತುರುವೇಕೆರೆ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲು ಮೆಟ್ರಿಕ್ ಪೂರ್ವ ನಿಲಯಗಳನ್ನು ಅರಮಲ್ಲೇನಗಹಳ್ಳಿ ಹಾಗೂ ಮಾವಿನಕೆರೆ ಮತ್ತು ಮೆಟ್ರಿಕ್ ನಂತರದ ನಿಲಯವನ್ನು ತುರುವೇಕೆರೆಯಲ್ಲಿ ಪ್ರಾರಂಭಿಸಲು ಮನವಿಗಳು ಬಂದಿರುತ್ತದೆ. ವಿದ್ಯಾರ್ಥಿನಿಲಯಗಳನ್ನು ಬೇಡಿಕೆ. ಸೂಕ್ತತೆ ಹಾಗೂ ಆಯವ್ಯಯದ ಲಭ್ಯತೆಯನ್ನಾಧರಿಸಿ ಮಂಜೂರು ಮಾಡಲಾಗುತ್ತಿದ್ದು. ಅದರಂತೆ ಕ್ರಮ ತೆಗೆದುಕೊಳ್ಳಲಾಗುವುದು.

೩೮೭೫ (೪೦೭೬) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) :- ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಹೊಸದಾಗಿ ಪಶು ಆಸ್ಪತ್ರೆಯನ್ನು ತೆರೆಯಲು ಮನವಿ ಸಲ್ಲಿಸಿರುವುದು (ವಡನಗಟ್ಟಿ, ಗಿರೇನಹಳ್ಳಿ, ಮುದ್ದನಹಳ್ಳಿ,) ಹಾಗಿದ್ದಲ್ಲಿ ಈ ಸಂಬಂಧವಾಗಿ ಕೈಗೊಂಡಿರುವ ಕ್ರಮವೇನು?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) ರಾಜ್ಯದಲ್ಲಿ ಸಾಕಷ್ಟು ಪಶುವೈದ್ಯಕೀಯ ಸಂಸ್ಥೆಗಳು ಇದ್ದು, ಸರ್ಕಾರಿ ಆದೇಶ ಸಂಖ್ಯೆ ಪಸಂಮೀ ೧೧೧ ಪಸಸ ೧೯೯೯ ದಿನಾಂಕ ೨೦-೧೧-೨೦೦೦ ರಲ್ಲಿ ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ತೆರೆಯುವ ಅವಕಾಶ ಇರುವುದಿಲ್ಲ. ಹಾಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಉನ್ನತೀಕರಿಸುತ್ತಿದ್ದು, ೨೦೦೦-೦೧ ನೇ ಸಾಲಿನಿಂದ ೩ ಪಶುಚಿಕಿತ್ಸಾ ಕೇಂದ್ರಗಳನ್ನು ತುರುವೇಕೆರೆ ತಾಲ್ಲೂಕಿನಲ್ಲಿ ಉನ್ನತೀಕರಿಸಲಾಗಿದೆ.

ಡಾ॥ ಡಿ.ಎಂ. ನಂಜುಂಡಪ್ಪನವರ ಸಮಿತಿಯ ಶಿಫಾರಸ್ಸಿನಂತೆ ರಾಜ್ಯದ ೩೯ ಅತಿ ಹಿಂದುಳಿದ ತಾಲ್ಲೂಕುಗಳನ್ನು ಹೊರತುಪಡಿಸಿ ಇತರೆ ತಾಲ್ಲೂಕುಗಳಲ್ಲಿ ಪಶು ವೈದ್ಯಕೀಯ ಸಂಸ್ಥೆಗಳನ್ನು ಹೊಸದಾಗಿ ತೆರೆಯಲು ಅವಕಾಶವಿರುವುದಿಲ್ಲ.

ಆದಾಗ್ಯೂ ವಡವನಘಟ್ಟ ಗ್ರಾಮಕ್ಕೆ ಪಶು ವೈದ್ಯಕೀಯ ಸೌಲಭ್ಯವನ್ನು ೮ ಕಿ.ಮೀ ಅಂತರಗಳಲ್ಲಿರುವ ಮಾಯಸಂದ್ರ ಪಶು ಆಸ್ಪತ್ರೆಯಿಂದ ಗಿರೇನಹಳ್ಳಿ ಗ್ರಾಮಕ್ಕೆ ಪಶು ವೈದ್ಯಕೀಯ ಸೌಲಭ್ಯವನ್ನು ೫ ಕಿ.ಮೀ ಅಂತರದಲ್ಲಿರುವ ಪಶು ಚಿಕಿತ್ಸಾಲಯ ಸಂಪಿಗೆ ಮತ್ತು ೫ ಕಿ.ಮೀ ಅಂತರದಲ್ಲಿರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಚಾಕುವಳ್ಳಿ ಪಾಳ್ಯದಿಂದ ಒದಗಿಸಲಾಗುತ್ತಿದೆ. ಈ ಎರಡು ಗ್ರಾಮ ಸುತ್ತಮುತ್ತಲಿನ ಗ್ರಾಮಗಳಿಗೆ ಸೇರಿದಂತೆ ಜಾನುವಾರುಗಳ ಸಂಖ್ಯೆ ನಿಗದಿತ ಸಂಖ್ಯೆಗಿಂತ ಕಡಿಮೆ ಇರುತ್ತದೆ. ಮುದ್ದನಹಳ್ಳಿ ಗ್ರಾಮಕ್ಕೆ ಪಶು ವೈದ್ಯಕೀಯ ಸೌಲಭ್ಯವನ್ನು ೬ ಕಿ.ಮೀ ಅಂತರದಲ್ಲಿರುವ ಪಶು ಚಿಕಿತ್ಸಾಲಯ ತಂಡಗೆ ಹಾಗೂ ತಿಪಟೂರು ತಾಲ್ಲೂಕಿನ ೧ ಕಿ.ಮೀ ಅಂತರದಲ್ಲಿರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಹೊಂಗೆ ಲಕ್ಷ್ಮೀ ಕ್ಷೇತ್ರದಿಂದ ಒದಗಿಸಲಾಗುತ್ತಿದೆ.

೩೮೭೬ (೩೯೪೭) **ಶ್ರೀ ಲಾಲಾಜಿ ಆರ್. ಮೆಂಡನ್** :– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಇರುವ ನೇಕಾರರ ಸಂಖ್ಯೆ ಎಷ್ಟು;

ಆ) ೨೦೦೪–೦೫ರ ಸಾಲಿನಲ್ಲಿ ಉಡುಪಿಯಲ್ಲಿರುವ ನೇಕಾರರ ಸಂಘಕ್ಕೆ ಸಹಾಯಧನ ಮಂಜೂರಾತಿ ನೀಡಲಾಗಿದೆಯೇ;

ಇ) ಪ್ರಸಕ್ತ ಸಾಲಿನಲ್ಲಿ ನೇಕಾರರಿಗೆ ನೇಕಾರರಿಗೆ ನೀಡಿರುವ ರಿಯಾಯಿತಿಯಲ್ಲಿ, ಉಡುಪಿ ಜಿಲ್ಲೆಗೆ ಎಷ್ಟು ಹಣ ಸಹಾಯ ನೀಡಲಾಗಿದೆ;

ಈ) ಉಡುಪಿ ಜಿಲ್ಲೆಯ ಕೈಮಗ್ಗ ನೇಕಾರರ ಕಲ್ಯಾಣ ಕಾರ್ಯಕ್ರಮಕ್ಕಾಗಿ ಸರ್ಕಾರ ಕ್ರಮ ಕೈಗೊಂಡಿದೆಯೇ;

ಉ) ಈ ಬಡ ನೇಕಾರರ ಮಕ್ಕಳಿಗೆ ವಿದ್ಯಾರ್ಥಿವೇತನ ಅಲ್ಲದೆ, ಇತರೆ ಸೌಲಭ್ಯಕ್ಕಾಗಿ ಸರ್ಕಾರ ವಿಶೇಷ ಆದೇಶವನ್ನು ಹೊರಡಿಸುವುದೇ?